**<u>ಅಸಲು ದಾವಾ ಸಂಖ್ಯೆ 17/2019</u>** **ಪಿ.ಡಬ್ಲ್ಯೂ:- 1**

ದಿನಾಂಕಃ **30-01-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- 1 ನೇ ಪ್ರತಿವಾದಿ ಪರ ವಕೀಲರಿಂದ:-</u>

1981 ನೇ ಸಾಲಿನಲ್ಲಿ ನನ್ನ ಅಜ್ಜಿ ಅಮೀರ್ ಬೀ ತೀರಿಕೊಂಡಿದ್ದು ತದನಂತರ ನಮ್ಮ ತಂದೆ ಮತ್ತು ಚಿಕ್ಕಪ್ಪ ದೊಡ್ಡಪ್ಪಂದಿರುವ ಸಾಸ್ವೇಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದರು. ವಾದ ಪತ್ರದಲ್ಲಿ ವಾದಿ 1 ರಿಂದ 5 ರವರು ವಾಸವಾಗಿರುವ ವಿಳಾಸದಲ್ಲಿ ಸುಮಾರು 10 ವರ್ಷಗಳಿಂದ ವಾಸವಾಗಿದ್ದೇವು. ಅದಕ್ಕೂ ಪೂರ್ವದಲ್ಲಿ ಹಳೇಮಂಡ್ಲಿ ವಿಳಾಸದಲ್ಲಿ ವಾಸವಾಗಿದ್ದೆವು. ನಾವು ಶಿವಮೊಗ್ಗದಲ್ಲಿ ಸುಮಾರು 30 ವರ್ಷಗಳಿಂದ ವಾಸವಾಗಿದ್ದೇವೆ. ನಾವು ಶಿವಮೊಗ್ಗ ಹೋಗಿ ವಾಸವಾದ ನಂತರ ಪ್ರತಿವಾದಿಗಳ ಜೊತೆ ಯಾವುದೇ ಒಡನಾಟ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಶಿವಮೊಗ್ಗದಲ್ಲಿ ಸುಮಾರು 30 ವರ್ಷಗಳಿಂದ ವಾಸವಾಗಿದ್ದರಿಂದ ದಾವಾ ಆಸ್ತಿಯಲ್ಲಿ ನಾವು ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ತಂದೆ ತೀರಿಕೊಂಡ ನಂತರ 2009 ನೇ ಸಾಲಿನಿಂದ ದಾವಾ ಆಸ್ತಿಗಳ ಸ್ವಾಧೀನಾನುಭವವನ್ನು ಗುತ್ತಿಗೆ ಆಧಾರ ಮೇಲೆ ಪ್ರತಿವಾದಿಗಳಿಗೆ ಬಿಟ್ಟುಕೊಟ್ಟಿರುತ್ತೇವೆ. ದಾವಾ ಆಸ್ತಿಗಳನ್ನು ಪ್ರತಿವಾದಿಗಳಿಗೆ ಗುತ್ತಿಗೆ ಆಧಾರದ ಮೇಲೆ ಬಿಟ್ಟುಕೊಟ್ಟಿರುವ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ದಾವಾ ಆಸ್ತಿಯಲ್ಲಿ ನಾವು ಯಾವತ್ತೂ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸೈಯದ್ ಅಹಮ್ಮದ್ ನನ್ನ ಅಜ್ಜನ ಹೆಸರು. ನಮ್ಮ ಅಜ್ಜನಿಗೆ ಇಬ್ಬರು ಹೆಂಡತಿಯರು ಅಂದರೆ ಅಮೀರ್ ಬೀ ಮೊದಲನೇ ಹೆಂಡತಿ ಮತ್ತು ಫಾತೀಮಾ ಬೀ ಎರಡನೇ ಹೆಂಡತಿ. ಅಮೀರ್ ಬೀ ರವರಿಗೆ ಇಬ್ಬರೂ ಮಕ್ಕಳು ಅಂದರೆ ಸೈಯದ್ ಷಫೀ ಮತ್ತು ಪ್ಯಾರೀಜಾನ್. ಸೈಯದ್ ಷಫೀ ಮತ್ತು ಪ್ಯಾರೀಜಾನ್ ರವರ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. ಅಮೀರ್ ಬೀ ರವರು ನಮ್ಮ ಅಜ್ಜನನ್ನು ಯಾವಾಗ ಮದುವೆಯಾದರೂ ಎಂಬ ಬಗ್ಗೆ ನಿರ್ದಿಷ್ಟ ದಿನಾಂಕ ನನಗೆ ಗೊತ್ತಿಲ್ಲ. ದಿಃ 04-05-1942 ರಂದು ನಮ್ಮ ಅಜ್ಜನ ಜೊತೆ ಅಮೀರ್

ಬೀ ರವರ ಮದುವೆ ಆಗಿರುತ್ತದೆ ಎಂದರೆ ಆಗಿರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮುಸ್ಲಿಂ ಧರ್ಮದಲ್ಲಿ ಗಂಡನು ವಿವಾಹ ವಿಚ್ಚೇದನೆಯನ್ನು ಪಡೆಯಲು ತಲಾಕ್ ಘೋಷಣೆ ಮಾಡಬೇಕು ಮತ್ತು ಹೆಂಡತಿ ವಿವಾಹ ವಿಚ್ಚೇದನೆಯನ್ನು ಪಡೆಯಲು ಖುಲ್ಲಾ ಘೋಷಣೆ ಮಾಡಬೇಕು. ದಿಃ 18-08-1948 ರಂದು ಅಮೀರ್ ಬೀ ರವರು ನಮ್ಮ ಅಜ್ಜನಿಂದ ವಿವಾಹ ವಿಚ್ಚೇದನೆಯನ್ನು ಪಡೆಯಲು ಖುಲ್ಲಾ ಘೋಷಣೆ ಮಾಡಿದ್ದರು ಎಂದರೆ ಸರಿಯಲ್ಲ. 1948 ನೇ ಸಾಲಿನಲ್ಲಿ ಇಸ್ಲಾಂ ಧರ್ಮದ ಪ್ರಕಾರ ರೂ.2,850/-, 5 ತೊಲ ಬಂಗಾರ, 2 ತೊಲದ ಉಂಗುರ, 9 ಸೇರು ಬೆಳ್ಳಿ ಯನ್ನು ಅಮೀರ್ ಬೀ ರವರು ಪಡೆದುಕೊಂಡು ನಮ್ಮ ಅಜ್ಜನೊಂದಿಗೆ ಅವರು ವಿವಾಹ ವಿಚ್ಚೇದನೆಯನ್ನು ಪಡೆಯಲು ಖುಲ್ಲಾ ಘೋಷಣೆ ಮಾಡಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ಬಸವಪಟ್ಟಣ ಜಾಮೀಯಾ ಮಸೀದಿಯಲ್ಲಿ ಖುಲ್ಲಾನಾಮ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ಅಮೀರ್ ಬೀ ರವರು ನಮ್ಮ ಅಜ್ಜರಿಂದ ವಿವಾಹ ವಿಚ್ಚೇದನೆಯನ್ನು ಪಡೆದುಕೊಂಡ ನಂತರ ಸೈಯದ್ ಷಫೀ ಮತ್ತು ಪ್ಯಾರೀಜಾನ್ ರವರ ಜನನವಾಗಿರುತ್ತದೆ ಎಂದರೆ ಸರಿಯಲ್ಲ. ಅಮೀರ್ ಬೀ ರವರು ನಮ್ಮ ತಾತನ ಜೊತೆಯಲ್ಲಿ ಖುಲ್ಲಾ ಘೋಷಣೆಯನ್ನು ಮಾಡಿಕೊಂಡ ನಂತರ ನಮ್ಮ ಅಜ್ಜರು ಫಾತೀಮಾ ಬೀ ರವರನ್ನು ಮದುವೆಯಾಗಿರುತ್ತಾರೆ ಎಂದರೆ ಸರಿಯಲ್ಲ. ಫಾತೀಮಾ ಬೀ ರವರಿಗೆ 1 ರಿಂದ 4 ನೇ ಪ್ರತಿವಾದಿಗಳು ಮಕ್ಕಳು. ದಾವಾ ಎ ಶೆಡ್ಯೂಲ್ ಆಸ್ತಿಯ ಐಟಂ ನಂ.1 ರ ಆಸ್ತಿಯನ್ನು 1 ನೇ ಪ್ರತಿವಾದಿ ಮತ್ತು ಅವರ ಚಿಕ್ಕಪ್ಪರವರು 1961 ರಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಉಳಿದ ದಾವಾ ಆಸ್ತಿಗಳನ್ನು 1 ನೇ ಪ್ರತಿವಾದಿಯು ಅಪ್ರಾಪ್ತ ವಯಸ್ಕರಾಗಿದ್ದರಿಂದ ಅವರ ಅಜ್ಜನನ್ನು ಮೈನರ್ ಗಾರ್ಡಿಯನ್ ಆಗಿ ನೇಮಕ ಮಾಡಿ ಖಾರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಅಜ್ಜ 1987 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. 1992-93 ನೇ ಸಾಲಿನಲ್ಲಿ 1 ನೇ ಪ್ರತಿವಾದಿ, ಸೈಯದ್ ಗೌಸ್ ಬಿನ್ ಸೈಯದ್ ಖರೀಂ ರವರು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ದಾವಾ ಶೆಡ್ಯೂಲ್ ಆಸ್ತಿಯ ಐಟಂ ನಂ.2 ರಿಂದ 4 ಆಸ್ತಿಗಳು 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮತ್ತು ಪಹಣಿ ಆಗಿರುವ ಬಗ್ಗೆ ಕಂದಾಯ ನ್ಯಾಯಾಲಯಗಳಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ದಿಃ 16-01-1991 ರಂದು 1 ನೇ

ಪ್ರತಿವಾದಿ ಮತ್ತು ಸೈಯದ್ ಗೌಸ್ ರವರು ದಾವಾ ಎ ಶೆಡ್ಯೂಲ್ ಆಸ್ತಿಯ ಐಟಂ ನಂ.2 ರಿಂದ 4 ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಅದನ್ನು ನಾವು ಪ್ರಶ್ನೆ ಮಾಡಿರುವುದಿಲ್ಲ. ದಿಃ 16-01-1991 ರ ವಿಭಾಗ ಪತ್ರದಲ್ಲಿ 1 ನೇ ಪ್ರತಿವಾದಿಗೆ ಬಂದಂತಹ ಆಸ್ತಿಗಳನ್ನು ವಾದಿ 1 ರಿಂದ 3 ರವರು 2007-08 ನೇ ಸಾಲಿನಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಅದರಂತೆ ಖಾತೆ ಮತ್ತು ಪಹಣಿ ಅವರ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. 3 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ ದಾವಾ ಎ ಶೆಡ್ಯೂಲ್ ಆಸ್ತಿಯ ಐಟಂ ನಂ.3 ರಲ್ಲಿ 20 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅದರಂತೆ 6 ನೇ ಪ್ರತಿವಾದಿಯ ಹೆಸರಿಗೆ ಖಾತೆ ಪಹಣಿ ಆಗಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. 6 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡುವ ಪೂರ್ವದಲ್ಲಿ ತಹಶೀಲ್ದಾರ್ ರವರಿಗೆ ಖಾತೆಯನ್ನು ಮಾಡದಂತೆ ಅರ್ಜಿಯನ್ನು ಸಲ್ಲಿಸಿದ್ದೆವು. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.